Doc-322
T.P-2

51st Year of Publication ✱ SATYAVADI Daily, MYSORE 4

Reg No B G 155 20-6-1968

ತೆಳುವು ರಕ್ತಹೀನತೆಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯೆಚ್ಚು ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space -available

For Permanent Advertisement

ಪ್ರಕಾಶಕರು : ಶಿವಸ್ವಾಮಿ ಶಾಸ್ತ್ರಿಗಳವರ್ ಎಂ. ಎ. ಮುದ್ರಣಕರ್ತರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ದೌರ್ಜನ್ಯ ನಾಗಾಗಳ ಠಾಣೆಗಳು ನಾಶಮಾಡಲ್ಪಟ್ಟವು

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಜುಲೈನಲ್ಲಿ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆಸ್ಟಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಶ್ರೀ ನೇತ್ರ ದಾನಿ ಡಾ॥ ಎಂ. ಸಿ ಮೋದಿಯವರು ಶುಭಾಶಯಪೂರ್ವಕ ಧನ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನಸೇರವನ್ನೂ ಅದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈ ಸೇವಾವಕಾಶವೆಂದು ಆಶಿಸಿ, ಕೃತಜ್ಞತಾಪೂರ್ವಕ ವಂದಿಸುತ್ತೇವೆ.

✱ ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಸಮುದ್ರ ನುಂಗುತ್ತಿದೆ

ಕಲ್ಲಿಕೋಟೆ— ನುಗ್ಗುತ್ತಿರುವ ಅರೇಬಿಯನ್ ಸಮುದ್ರವು ಮಲಬಾರಿನ 3 ಕಡೆ ತಕ್ಕಷ್ಟು ಭೂಮಿಯನ್ನು ನುಂಗಿದೆ.

✱

ಆಸ್ಟ್ರೇಲಿಯಾ ಸರಕಾರವು 220 ಭಾರತೀಯ ವರ್ಣಚಿತ್ರ ಮತ್ತು ಶಿಲಾಚಿತ್ರಗಳನ್ನು ಹೊಂದಿದೆ.

ಖುಷಿ ಕಾಯಿಲೆ

ಅಕ್ರ— ಪಶ್ಚಿಮ ಘಾನದ ಕೋಪ್ತೋರಿ ಡುವಾದಲ್ಲಿಯ ಸೂಲಿನಲ್ಲಿ ಫಿಕಾಏಕಿ 20 ಶಾಲಾ ಹುಡುಗಿಯರಿಗೆ ಒಂದು ರೀತಿ ಖಾಯಿಲೆಯಾಗಿ ನಗಲೂ, ಅಳಲೂ, ಗೂಡಡಿಯಲ್ಲೆಲ್ಲಾ ಸುತ್ತಾಡಲುಪಕ್ರಮಿಸಿದರು — ಹುಡುಗರಿಗೆ ಏನೂ ಆಗಿಲ್ಲ — ಈ ಬಗ್ಗೆ ವೈದ್ಯ ವರದಿ ಬರುವವರೆಗೆ ಸ್ಕೂಲು ಮುಚ್ಚಲಾಗಿದೆ.

✱

ಜೀವಕ್ಕೆ ಅಪಾಯ

ಶಿವಮೊಗ್ಗ — ಸಾಮೂಹಿಕವಾಗಿ ಮುಸಿಪಲ್ ನೌಕರರನ್ನು ವರ್ಗಾಯಿಸಿದ್ದಕ್ಕೆ ತಮ್ಮ ಜೀವ ಮತ್ತು ಆಸ್ತಿಗೆ ಅಪಾಯದ ಬೆದರಿಕೆ ಪತ್ರ ಬಂದಿರುವದೆಂದು ಮುನಿಸಿಪಲ್ ಕಮಿಷನರ್ ಶ್ರೀ ಬಸಪ್ಪ ನಾಯಕರು ಪೋಲೀಸು ಸೂಪರಿಂಟೆಂಡೆಂಟರಿಗೆ ತಿಳಿಸಿ, ಪೋಲೀಸು ರಕ್ಷಣೆ ಕೊಟ್ಟು, ದಷ್ಟರನ್ನು ಪತ್ತೆಹಚ್ಚಬೇಕೆಂದು ವಿನಂತಿಸಿದ್ದಾರೆ.

✱

ಚಿಕ್ಕ ಕಾರು

ಮದರಾಸು— ಚಿಕ್ಕ ಕಾರು ಪ್ರಾಜೆಕ್ಟು ವಿಷಯವನ್ನು ಇನ್ನು ಆರು ತಿಂಗಳಲ್ಲಿ ಸರಕಾರ ನಿರ್ಧರಿಸುವದೆಂದು ಕೇಂದ್ರ ಕೈಗಾರಿಕಾ ಉಪ ಮಂತ್ರಿ ಶ್ರೀ ಬಾನು ಪ್ರಸಾದ ಸಿಂಗ್ ಹೇಳಿದರು.

✱

ಮಲ್ಲೆ ರೇವು

ಬೆಂಗಳೂರು— ಪ್ರಾಕೃತಿಕವಾಗಿರುವ ಮಲ್ಪೆ ರೇವನ್ನು ರೂ. 4.50 ಕೋಟಿ ಖರ್ಚಿನಿಂದ ಅಭಿವೃದ್ಧಿಗೊಳಿಸುವ ಯೋಜನೆಯ ವರದಿಯನ್ನು ಫ್ರೆಂಚ್‌ಗೊಸ್ಲೋವಿಸ್ಟ್ ಸಲಹೆಗಾರರು ಮೈಸೂರು ಸರಕಾರಕ್ಕೆ ಒಪ್ಪಿಸಿದರು.

✱

ಅಂತರಾಷ್ಟ್ರೀಯ ಮೋಟಾರ್ ರೇಸ್‌ನಲ್ಲಿ ಭಾರತೀಯ

ಬೊಂಬಾಯಿ— ಬೊಂಬಾಯಿ ನಾಗಪುರ ಮೋಟಾರು ರೇಸಿನಲ್ಲಿ ಈಚೆಗೆ ವಿಜಯಗೊಂಡ ಶ್ರೀ ಸುರೇಷ್ ಗಾಂಧಿಯವರು ಭೂಮಿಯ ಮೇಲೆ ಯೂರೋಪು—ಏಷ್ಯ—ಆಸ್ಟ್ರೇಲಿಯಗಳಲ್ಲಿ 12 ದಿನಗಳ 10000 ಮೈಲಿಗಳ ಅಂತರಾಷ್ಟ್ರೀಯ ಮೋಟಾರು ರೇಸಿನಲ್ಲಿ ಭಾಗವಹಿಸಲು ಆರಿಸಲ್ಪಟ್ಟ ಡ್ರೈವರ್ : ಪ್ರವೇಶ ಧನ ರೂ. 12500 ನ್ನು ಮೋಟಾರು ಅಸೋಸಿಯೇಷನ್ ಮೂಲಕ ಕೊಟ್ಟಿದ್ದಾರೆ. ಅಂತರಾಷ್ಟ್ರೀಯ ಮೋಟಾರು ರೇಸ್‌ನಲ್ಲಿ ಭಾಗವಹಿಸಲಿರು ಪ್ರಪ್ರಥಮ ಭಾರತೀಯರಿವರು.

✱

ಜೀವಸಹಿತ ಹೂತುಹೋದರು

ರಯೋಡಿ ಜನೀರೊ— ಬಾಹಿಯಾ ರಾಜ್ಯದ ಸಾಲ್ವಡಾರ್‌ನಲ್ಲಿ ಗುಡ್ಡದ ಒಂದು ಭಾಗ ಕುಸಿದು, 50 ಮಂದಿ ಜೀವ ಸಹಿತ ಹೂಳಲ್ಪಟ್ಟರು.

●

ಪಾಕಿಸ್ತಾನ ಕೈವಾಡ

ಶ್ರೀನಗರ— ದೇಶದ ವಿವಿಧ ಭಾಗಗಳಲ್ಲಿ ಈಜಿಗೆ ಆದ ಕೋಮುದಾರು ಗಲಭೆಗಳಲ್ಲಿ ಪಾಕಿಸ್ತಾನದ ಕೈವಾಡವಿದೆಯೆಂದು ಜನಸಂಘದ ಕಾರ್ಯದರ್ಶಿ ಶ್ರೀ ನಾನಾಜೀ ದೇಶಮುಖ್ ಹೇಳಿದರು.

✱

ಭಾರತೀಯನ ಸಾಹಸ

ಟಾಂಜೀರ್ಸ್— ಭಾರತೀಯ ಮಹಮದ್ ನವಾಬ್ ಸ್ಥಳೀಯ ಸ್ಟೇಡಿಯಂನಲ್ಲಿ 100 ಗಂಟೆ ಕಾಲ ನಿರಂತರ ಸೈಕಲ್ ಸವಾರಿ ಮಾಡಿ, ಈ ಬಗ್ಗೆ ವಿಶ್ವದ ದಾಖಲೆ ಮುರಿದನು.

ದೌರ್ಜನ್ಯ ನಾಗಾಗಳು

ಕೊಹಿಮಾ—ನಾಗಾಲ್ಯಾಂಡು ಮತ್ತು ಬರ್ಮಾದ 200 ಮೈಲಿಗಡಿಯಲ್ಲಿದ್ದ ದೌರ್ಜನ್ಯ ನಾಗಾಗಳ 25 ಠಾಣೆಗಳನ್ನು ರಕ್ಷಣಾ ಪಡೆಯವರು ನಾಶಮಾಡಿದರು.

✱

ಖೈದಿಗಳ ದಾಂಧಲೆ

ಪಣಜಿ— ಅಕ್ಯೂಡಾ ಕೇಂದ್ರ ಜೈಲಿನಲ್ಲಿ ಸುಮಾರು 150 ಖೈದಿಗಳು ತಮ್ಮ ಕೇಳಿಕೆಯನ್ನು ಒತ್ತಾಯ ಮಾಡಲು, ಗಾರ್ಡುಗಳನ್ನು ಲಾಠಿಯಿಂದ ಹೊಡೆಯಲು ಬೆದರಿಸಿ, ಅವರೆಲ್ಲಾ ಓಡಿಹೋಗಲು ಬಾಗಿಲು ಒಳಗಡೆಗೆ ಬೀಗಾ ಹಾಕಿಕೊಂಡು 24 ಗಂಟೆ ಕಾಲ ಜೈಲಿನ ಆಡಳಿತವನ್ನು ಹೊಂದಿದ್ದರು — ನಂತರ ಡಿಎಸ್ಪಿಯವರು ಬಂದು ಉಪಾಯದಿಂದ ಬಾಗಲು ತೆಗೆಸಿ, ಅವರ ಕೇಳಿಕೆಯನ್ನು ನ್ಯಾಯಾಂಗ ಮಂತ್ರಿಗಳ ಮುಂದಿಡುವುದಾಗಿ ಸಮಾಧಾನ ಮಾಡಿದರು.

✱

ಸ್ಕೂಲು ಹುಡುಗಿ ಗರ್ಭಿಣಿಯಾಗಿ

ಹ್ಯಾಂಬರ್ಗ್— ಪಶ್ಚಿಮ ಜರ್ಮನಿಯಲ್ಲಿ ಎಲ್ಲಾದರೂ ಒಂದು ಕಡೆ ಪ್ರತಿದಿನವೂ ಯಾರಾದರೊಬ್ಬ 13 ವರ್ಷದ ಸ್ಕೂಲು ಹುಡುಗಿಯು ಮಗುವನ್ನು ಹೆರುತ್ತಿರುವದಾಗಿ ಅಂಕಿಅಂಶ ಸಂಸ್ಥೆ ಪ್ರಕಟಿಸಿದೆ — 17 ವರ್ಷದಿಂದೀಚೆಗೆ ಸ್ಕೂಲು ಹುಡುಗಿಯರು ತಾಯಂದಿರಾಗುವುದು ಎರಡರಷ್ಟು ಹೆಚ್ಚಿದೆ — ಈ ಗರ್ಭಿಣಿ ಸ್ಕೂಲು ಹುಡುಗಿಯರ ರಕ್ಷಣೆಯನ್ನು 1949 ರಿಂದ ಹ್ಯಾಂಬರ್ಗ್ ವಹಿಸಿದೆ — ಈ ವಿಶೇಷ ಸ್ಕೂಲುಗಳಿಗೆ ವರ್ಷಕ್ಕೆ 500 ಗರ್ಭಿಣಿ ಸ್ಕೂಲು ಹುಡುಗಿಯರು ಸೇರಿಸಿಕೊಳ್ಳಲ್ಪಡುತ್ತಾರೆ.

ಭಕ್ತ ತುಳಸೀದಾಸ್

(ಮುಂದುವರಿದುದು)

ತುಳಸೀದಾಸನ ಸ್ವಾಭಾವಿಕವಾದ ವಕ್ರಬುದ್ಧಿ ನೋಲ್ಲಿಲ್ಲ ಆಗಿ, ದೇವರ ದಯೆಯಿಂದ ಒದಗಿದ ಈ ಅವಕಾಶಕ್ಕೆ ನಂದಿಸದೆ, ' ನಿನ್ನಂತಹ ದುರವಸ್ಥೆಯ ಅಸಹ್ಯ ಪ್ರಾಣಿ ಏನು ವರ ಕೊಟ್ಟೀತು ? ನಿನಗೇನಾದರೂ ಶಕ್ತಿಯಿದ್ದರೆ, ನಿನ್ನ ಅಸಹ್ಯಕರವಾದ ದುರವಸ್ಥೆಯಿಂದ ಪ್ರಭುವಾತ್ಮ ಪಡುಗಡೆ ಹೊಂದು " ಎಂದು ಬಿಗುಮಾನದ ಉತ್ತರವಿತ್ತನು.

' ಅದೆನ್ನು ನಾನು ಮಾಡಲಾರೆ ; ಆದರೆ ನಾನು ಆಶ್ಚರ್ಯ ವಿಷಯಗಳನ್ನು ಮಾಡಬಲ್ಲೆ " ಎಂದು ಅದು ಹೇಳಿತು.

' ನಿನ್ನ ಮೆಹರ್ಬಾನು ಅವಶ್ಯವಿಲ್ಲ " ಎಂದು ತುಳಸೀದಾಸ್ ತಿರಸ್ಕಾರಭಾವದ ಉತ್ತರವಿತ್ತನು.

' ಯಾರನ್ನು ಹುಡುಕಿಕೊಂಡು ನೀನು ಮನೆಮಠ ಬಿಟ್ಟು ಬಂದಿರುವೆಯೋ ಆ ಭಗವಂತನನ್ನು ನಾನು ನಿನಗೆ ತೋರಿಸಬಲ್ಲೆ " ಎಂದಿತು ಆ ಭೂತ.

ಪಶ್ಚಾತ್ತಾಪ ಪಡತಕ್ಕ ಪದಾರ್ಥವೆಂದು ತಾನು ತಿಳಿದಿದ್ದ ಆ ಭೂತವು ತನ್ನ ಹೃದಯದ ಆಂತರ್ಯ ಅರಿಯಬಲ್ಲ ಒಬ್ಬ ಗೊತ್ತಾದಾಗ ತುಳಸೀದಾಸನು ಆಶ್ಚರ್ಯ ಚಕಿತನಾದನು, ಅವನಲ್ಲಿ ನೆಲೆಸಿದ್ದ ವಕ್ರಬುದ್ಧಿಯು ಗೆಲ್ಲಲ್ಪಟ್ಟಿತು.

' ನೀನು ಶ್ರೀ ರಾಮಚಂದ್ರನನ್ನು ತೋರಿಸಬಲ್ಲೆಯಾ " ಎಂದು ತುಳಸೀದಾಸನು ಕೇಳಿದನು.

[ಸಶೇಷ]

SHAKTI

SUDHA

A Superb Tonic



ಗೋಹತ್ಯೆಯ ಮುಖ್ಯ ಕಾರಣವಾಗಿರುವ ಕಾಯ್ದೆಗಳು ಕೂಡಲೆ ಜಾರಿಗೆ ಬರಬೇಕು

Cow Slaughter should be banned Immediately

ವುಡ್‌ಲಾಂಡ್ಸ್ ಜನಪ್ರಿಯ 7ನೇ ವಾರ

.... ಸುಬೋಧ್ ಮುಖರ್ಜಿಯವರ ಈಸ್ಟ್‌ಮೆನ್ ಕಲರ್ ಹಿಂದಿ ಚಿತ್ರ ....

ಷಾಗಿರ್ದ್ Shagird

ತಾರಾಗಣ— ಜಾಯ್ ಮುಖರ್ಜಿ, ಸೈರಾಬಾನು, ನಾಜಿರ್‌ಹುಸೇನ್
ಅಚ್ಚಲ ಸಹದೇವ್, ಐ. ಎಸ್. ಜೋಹರ್ [ದಿನ 3 ಪ್ರದರ್ಶನ]

ಆಪೇರ— 14-6-68 ರಿಂದ

ಪದ್ಮಿನಿ ಪಿಕ್ಚರ್ಸ್‌ರವರ

ಕಿತ್ತೂರು ಚೆನ್ನಮ್ಮ

ಕನ್ನಡ

ನಿರ್ಮಾಪಕ, ನಿರ್ದೇಶನ : ಬಿ. ಆರ್. ಪಂತುಲು

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

— ಗೋರಕ್ಷಣೆ ವ್ಯವಸ್ಥಿತವಾಗಿ ನಡೆಯಲು —

ಗೋರಕ್ಷಣೆಗೆ ಲಕ್ಷಾನುಗಳನ್ನೂ ಪ್ರೋತ್ಸಾಹ ಧನವನ್ನೂ
ಮಂದಿನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆಗಳಿದಿಂದವರು ಇನ್ನಷ್ಟು ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅಸಂತಸಂಸಿಂಹಮ್ಮಂಗಾರ್, ಶಾಸ್ತ್ರಧರ್ಮವಿಜ್ಞಾನಸಭಾ ಹೊರಗೆನೂರಿ
ಗೋರಕ್ಷಣಾ ಆಫೀಸು, ಸತ್ಯವಾದಿ ಪ್ರೆಸ್ ಚಾಮರಾಜಪುರಂ ಮೈಸೂರು

ವಿಳಾಸ — ಗೋರಕ್ಷಣಾ ಆಫೀಸು 1067 ಚಾಮರಾಜಪುರಂ, ಮೈಸೂರು

Golden Jubilee of 'Satyavadi'

The golden jubilee of the ' Satyavadi ' is to be celebrated very soon.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, ' Satyavadi ' Chamarajapuram, Mysore 4.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4